

# ಕಾಟನ್‌ಪೇಟೆಯಿಂದ ಮಧುರೈವರೆಗೆ...

ಕಾಟನ್ ಪೇಟೆಯ ಪೈಲ್ವಾನನ ಮಗ ಹಾಗೂ ತಮಿಳುನಾಡು ಸೇಠುವಿನ ಮಗಳ ನಡುವೆ ಪ್ರೇಮ ಚಿಗುರಿದರೆ ಹೇಗಿರುತ್ತದೆ? ಇಂಥದೊಂದು ಭಿನ್ನ ಕಥನವನ್ನು ಓಂಪ್ರಕಾಶ್ ರಾವ್ ಚಿತ್ರರೂಪಕ್ಕೆ ತರುತ್ತಿದ್ದಾರೆ. ಪ್ರೇಮಿಯನ್ನು ಹುಡುಕಿಕೊಂಡು ಮಧುರೈಗೆ ಹೋಗುವ ನಾಯಕ ಅಲ್ಲಿ ಎದುರಿಸುವ ಬಿಕ್ಕಟ್ಟುಗಳ ಕಥೆ 'ಕಾಟನ್‌ಪೇಟೆ' ಚಿತ್ರದ್ದು.

'ಕಾಟನ್‌ಪೇಟೆ' ಆರು ವರ್ಷಗಳ ಹಿಂದೆ ಮುಹೂರ್ತ ನಡೆಸಿದ ಸಿನಿಮಾ. ಆಗ ಓಂಪ್ರಕಾಶ್ ಕೆಲವು ಚಿತ್ರಗಳ ಶೂಟಿಂಗ್ ಕೂಡ ನಡೆಸಿದ್ದರು. ಆದರೆ, ಇದ್ದಕ್ಕಿದ್ದಂತೆ ಸಿನಿಮಾ ನಿಂತುಹೋಯಿತು. ಓಂಪ್ರಕಾಶ್ ಕೂಡ ಹೊಸ ಸಿನಿಮಾಗಳಲ್ಲಿ ತೊಡಗಿಕೊಂಡರು. ಇದೀಗ ಹಳೆಯ ಕನಸನ್ನು ಮತ್ತೆ ಕೈಗೆತ್ತಿಕೊಂಡಿರುವ ಅವರು, ಹಳೆಯ ದೃಶ್ಯಗಳನ್ನು ಕೈಬಿಟ್ಟು ಹೊಸದಾಗಿಯೇ ಸಿನಿಮಾ ರೂಪಿಸುತ್ತಿದ್ದಾರೆ. ಅಂದಿನ ನಾಯಕ ಆದಿತ್ಯನ ಜಾಗಕ್ಕೆ ಈಗ ದುನಿಯಾ ವಿಜಯ್ ಬಂದಿದ್ದಾರೆ. ತಮಿಳುನಾಡಿನ ಹುಡುಗಿಯ ಪಾತ್ರದಲ್ಲಿ ಪರೂಲ್ ಯಾದವ್ ಅಭಿನಯಿಸುತ್ತಿದ್ದಾರೆ. ಚಿತ್ರದಲ್ಲಿ ವಿಜಯ್ ಹಾಗೂ ಪರೂಲ್ ಜೋಡಿ ಕಾಫಿ ಡಿಕಾಕ್ಷನ್ ಹಾಗೂ ಹಾಲು ಇದ್ದಂತೆ ಎನ್ನುವುದು ನಿರ್ದೇಶಕರ ಬಣ್ಣನೆ. ಪ್ರೇಮ ಹಾಗೂ ಸಾಹಸ ದೃಶ್ಯಗಳ ಜೊತೆಗೆ ಚಿತ್ರದಲ್ಲಿ ತಮಾಷೆ ಪ್ರಸಂಗಗಳೂ ಸಾಕಷ್ಟಿವೆಯಂತೆ.

ಚಿತ್ರದ ಕ್ಲೈಮ್ಯಾಕ್ಸ್ ಅನ್ನು ಅದ್ದೂರಿಯಾಗಿ ಚಿತ್ರೀಕರಿಸಲು ಓಂಪ್ರಕಾಶ್ ಯೋಜಿಸಿದ್ದಾರೆ. ರೈಲಿನಲ್ಲಿ ನಡೆಯುವ ಈ ದೃಶ್ಯದ ಶೂಟಿಂಗ್‌ಗೆ ಇಪ್ಪತ್ತೈದು ದಿನಗಳು ಬೇಕಂತೆ. ಎರಡು ಹಾಡುಗಳನ್ನು ವಿದೇಶದಲ್ಲಿ ಚಿತ್ರೀಕರಿಸುವ ಆಸೆ ಅವರದು. ಅಲ್ಲಿಗೆ 'ಕಾಟನ್‌ಪೇಟೆ' ಓಂಪ್ರಕಾಶ್‌ರ ಅದ್ದೂರಿ ಚಿತ್ರಗಳ ಪರಂಪರೆಯ ಮುಂದುವರಿಕೆ ಎನ್ನಬಹುದು. ಬುಲೆಟ್ ಪ್ರಕಾಶ್, ರಾಜು ತಾಳಿಕೋಟೆ ತಾರಾಗಣದಲ್ಲಿರುವ ಪ್ರಮುಖರು.



# ಸುಖಧರೆಯ 'ಮಂಡ್ಯ ಸ್ಪೆಷಲ್'

ಮಹೇಶ್ ಸುಖಧರೆ ನಿರ್ದೇಶನದ ಹೊಸ ಸಿನಿಮಾ 'ಹ್ಯಾಪಿ ಬರ್ತ್ ಡೇ'. ಕಳೆದ ವಾರವಷ್ಟೇ ಹಾಡುಗಳ ಧ್ವನಿಮುದ್ರಿಕೆ ಬಿಡುಗಡೆ ಮಾಡಿರುವ ಸುಖಧರೆ, ಈ ಸಿನಿಮಾದ ಮೂಲಕ ತಮ್ಮ ಗೆಲುವಿನ ಫಾರ್ಮ್ ಅನ್ನು ಮರಳಿ ಕಂಡುಕೊಳ್ಳುವ ಆತ್ಮವಿಶ್ವಾಸದಲ್ಲಿದ್ದಾರೆ.

'ಹ್ಯಾಪಿ ಬರ್ತ್ ಡೇ' ಅಪ್ಪಟ ದೇಸಿ ಚಿತ್ರ, ಗ್ರಾಮೀಣ ಸೊಗಡಿನ ಸಿನಿಮಾ ಎಂದು ಸುಖಧರೆ ಬಣ್ಣಿಸುತ್ತಾರೆ. ಹದಿನಾರಾಣೆ ಮಂಡ್ಯ ಪರಿಸರದಲ್ಲಿ ಮೂಡಿಬಂದಿರುವ ಈ ಸಿನಿಮಾದ ಪ್ರತಿ ಪಾತ್ರವೂ 'ಮಂಡ್ಯ ಕನ್ನಡ'ದ ಸೊಗಡು–ಸಂಸ್ಕೃತಿಯನ್ನು ಬಿಂಬಿಸಲಿದೆ ಎನ್ನುತ್ತಾರೆ. ಈ ನಂಟಿನ ಕಾರಣದಿಂದಲೇ ಅವರು ಹಾಡುಗಳ ಧ್ವನಿಮುದ್ರಿಕೆಯ ಬಿಡುಗಡೆಯನ್ನು ಮಂಡ್ಯದಲ್ಲಿಯೇ ನಡೆಸಿದ್ದಾರೆ. ವಿ. ಹರಿಕೃಷ್ಣ 'ಹ್ಯಾಪಿ ಬರ್ತ್ ಡೇ' ಚಿತ್ರಕ್ಕೆ ಸಂಗೀತ ಸಂಯೋಜಿಸಿದ್ದಾರೆ. ಜನಪದ ಶೈಲಿಯ ಹಾಡುಗಳನ್ನು ಅವರು ಚಿತ್ರದಲ್ಲಿ ರೂಪಿಸಿದ್ದಾರಂತೆ.

ಸಚಿನ್ ಹಾಗೂ ಸಂಸ್ಕೃತಿ ಶೆಣೈ ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದಾರೆ. ಸಚಿನ್ ಶಾಸಕ ಚಲುವರಾಯಸ್ವಾಮಿ ಅವರ ಪುತ್ರ. ಸಂಸ್ಕೃತಿ ಕೇರಳದ ಕೊಚ್ಚಿಯ ಚೆಲುವೆ. ಕಾರ್ಕಳ ಮೂಲಕ ಈ ಹುಡುಗಿ ಓದಿ ಬೆಳೆದದ್ದೆಲ್ಲ ಕೇರಳದಲ್ಲಿ. ಸಚಿನ್‌ರ ಉತ್ಸಾಹ ಹಾಗೂ ಬೊಗಸೆಕಣ್ಣುಗಳ ಸಂಸ್ಕೃತಿಯ ಅಮಾಯಕತೆ ಚಿತ್ರದಲ್ಲಿ ಸೊಗಸಾಗಿ ಚಿತ್ರಣಗೊಂಡಿದೆಯಂತೆ. ತಲೆಮಾರು ಎಷ್ಟೇ ಆಧುನಿಕವಾದರೂ ಪ್ರೇಮದ ನವಿರುತನದಲ್ಲಿ ಯಾವ ಬದಲಾವಣೆಯೂ ಇಲ್ಲ ಎನ್ನುವುದನ್ನು ಸಿನಿಮಾ ಪ್ರತಿಪಾದಿಸುತ್ತದಂತೆ. ಹಿರಿಯ ನಟ ಅಂಬರೀಶ್ ಮುಖ್ಯಪಾತ್ರದಲ್ಲಿ ನಟಿಸಿರುವುದು ಚಿತ್ರದ ವಿಶೇಷಣಗಳಲ್ಲೊಂದು.

■ ರಘು